## ಹಳ್ಳಿ ಸೊಗಡಿನ ಆಕರ್ಷಣೆ

ಚಿತ್ರಕಥೆಗಳೆಲ್ಲ ನಗರ ಪ್ರಧಾನವಾಗುತ್ತಿರುವ ಸಂದರ್ಭದಲ್ಲಿ ನಿರ್ದೇಶಕ ರಘುವರ್ಧನ್ ಹೆಮ್ಮೆಯಿಂದ ಹೇಳಿದ್ದು – ನಮ್ಮದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾ.

ರಘುವರ್ಧನ್ ಈ ಮೊದಲು 'ಗುಣವಂತ' ಎನ್ನುವ ಚಿತ್ರವನ್ನು ನಿರ್ದೇಶಿಸಿದವರು. ಈಗ 'ಮಿಸ್ಟರ್ ಎಲ್.ಎಲ್.ಬಿ.' ಚಿತ್ರದ ಮೂಲಕ ಮತ್ತೆ ಪ್ರೇಕ್ಷಕರ ಎದುರು ಬರುತ್ತಿದ್ದಾರೆ (ಫೆ. 16ರಂದು ತೆರೆಗೆ). ನಿರ್ದೇಶನದ ಜೊತೆಗೆ ಕಥೆ, ಚಿತ್ರಕಥೆ ಹಾಗೂ ನಿರ್ಮಾಣದ ಜವಾಬ್ದಾರಿಯೂ ಅವರದೇ. ಎರಡು ತಲೆಮಾರುಗಳ ಕಥೆಯನ್ನು ಒಳಗೊಂಡಿರುವ ಈ ಸಿನಿಮಾದ ಪ್ರಮುಖ ಆಕರ್ಷಣೆಗಳಲ್ಲಿ ಹಳ್ಳಿ ಸೊಗಡು ಹಾಗೂ ಹಾಸ್ಯದ ಸನ್ನಿವೇಶಗಳು ಸೇರಿವೆ ಎನ್ನುವುದು ಅವರ ಅನಿಸಿಕೆ.

ನಿರ್ದೇಶಕರು ಈ ಚಿತ್ರದಲ್ಲಿ ಹೆಚ್ಚಾಗಿ ಹೊಸ ಪ್ರತಿಭೆಗಳನ್ನೇ ನೆಚ್ಚಿಕೊಂಡಿದ್ದಾರೆ. ಧಾರಾವಾಹಿಗಳ ಮೂಲಕ ಕಿರುತೆರೆಯಲ್ಲಿ ಗುರ್ತಿಸಿಕೊಂಡಿರುವ ಶಿಶಿರ್ ಚಿತ್ರದ ನಾಯಕ. ಸಿನಿಮಾದಲ್ಲಿ ಅವರದು ಗೌಡನ ಮಗನ ಪಾತ್ರ. ಶಿಶಿರ್‌ಗೆ ನಾಯಕಿಯಾಗಿ ಲೇಖಾಚಂದ್ರ ನಟಿಸಿದ್ದಾರೆ. ನಾಯಕನನ್ನು ಯಾವಾಗಲೂ ಛೇಡಿಸಿಕೊಂಡು ಓಡಾಡುವ ಪಾತ್ರ ಅವರದಂತೆ.

ಮಂಜು ಚರಣ್ ಸಂಗೀತ ಸಂಯೋಜನೆ ಹಾಗೂ ಸುರೇಶ್ ಬಾಬು ಛಾಯಾಗ್ರಹಣ ಚಿತ್ರಕ್ಕಿದೆ. ಸುಜಯ್ ಹೆಗಡೆ, ನಂದಿನಿ, ಕೆಂಪೇಗೌಡ, ಶ್ರೀನಿವಾಸ ಗೌಡ್ರು, ಗಿರೀಶ್ ಜತ್ತಿ ಹಾಗೂ ಬೆಂಗಳೂರು ನಾಗೇಶ್ ತಾರಾಗಣದಲ್ಲಿರುವ ಪ್ರಮುಖರು.



## ಶರಣ್ ಮತ್ತು 'ಯವ್ವ ಯವ್ವ'

'ಈ ಸಿನಿಮಾದಲ್ಲಿ ನನ್ನ ಪಾತ್ರಕ್ಕೆ ಮಾತು ಕಡಿಮೆ. ಏಕೆಂದರೆ ನನ್ನ ಪಾತ್ರವೇ ಮಾತನಾಡುತ್ತದೆ'. ನಟ ಶರಣ್ 'ರ್‍ಯಾಂಬೊ 2' ಚಿತ್ರವನ್ನು ಬಣ್ಣಿಸಿದ್ದು ಹೀಗೆ. ಮಾತಿನ ಬಂಡವಾಳವನ್ನಷ್ಟೇ ನೆಚ್ಚಿಕೊಳ್ಳದೆ ಕಥನದ ಹೂರಣವನ್ನೂ ಈ ಸಿನಿಮಾ ನೆಚ್ಚಿಕೊಂಡಿರುವುದನ್ನು ಶರಣ್ ಮಾತು ಸೂಚಿಸುವಂತಿದೆ.

ನಾಯಕ ನಟನಾಗಿ ಶರಣ್‌ರ ವೃತ್ತಿಜೀವನಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಚಿತ್ರಗಳಲ್ಲಿ 'ರ್‍ಯಾಂಬೊ'ಗೆ ಪ್ರಮುಖ ಸ್ಥಾನವಿದೆ. ಹಾಸ್ಯ ಪಾತ್ರಗಳಿಂದ ಶರಣ್ ನಾಯಕನ ಸ್ಥಾನಕ್ಕೆ ಬಡ್ತಿ ಪಡೆದ ಚಿತ್ರವಿದು. ಈಗ ಆ ಶೀರ್ಷಿಕೆಯ ಮತ್ತೊಂದು ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಕಳೆದ ವಾರ ರ್‍ಯಾಂಬೊದ 'ಯವ್ವ ಯವ್ವ' ಎನ್ನುವ ಗೀತೆಯ ಟೀಸರ್ ಅನ್ನು ಬಿಡುಗಡೆ ಮಾಡಲಾಯಿತು. ವಿಜಯ್ ಪ್ರಕಾಶ್ ಹಾಡಿರುವ ಈ ಗೀತೆಗೆ, ಶರಣ್‌ರ ನೆಚ್ಚಿನ ಸಂಗೀತ ನಿರ್ದೇಶಕ ಅರ್ಜುನ್ ಜನ್ಯಾ ಅವರ ಸಂಯೋಜನೆಯಿದೆ.

'ರ್‍ಯಾಂಬೊ 2'ರಲ್ಲಿ ಶರಣ್ ಯದ್ವಾತದ್ವಾ ಕುಣಿದಿದ್ದಾರಂತೆ. ಈ ಮೊದಲಿನ ಚಿತ್ರಗಳಲ್ಲೂ ಅವರ ನೃತ್ಯ ಚಿತ್ರರಸಿಕರ ಗಮನ ಸೆಳೆದಿತ್ತು. ಆದರೆ, ಈ ಚಿತ್ರದಲ್ಲಿ ಅವರ ಡ್ಯಾನ್ಸ್ ಮತ್ತೊಂದು ಹಂತ ಮೇಲೇರಿದೆ ಎನ್ನುತ್ತಿದೆ ಚಿತ್ರತಂಡ. ನಟ, ಕಲಾ ನಿರ್ದೇಶಕ ಅರುಣ್ ಸಾಗರ್ ಅವರ ಪುತ್ರಿ ಗೀತೆಯೊಂದನ್ನು ಹಾಡಿರುವುದು ಚಿತ್ರದ ಮತ್ತೊಂದು ವಿಶೇಷ.

ಅನಿಲ್ ಕುಮಾರ್ ನಿರ್ದೇಶನದ ಈ ಚಿತ್ರದ ನಾಯಕಿಯಾಗಿ ಆಶಿಕಾ ನಟಿಸಿದ್ದಾರೆ. ಈವರೆಗೆ ಇಬ್ಬರು ಮೂವರು ನಾಯಕಿಯರ ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅವರಿಗಿದು ಪೂರ್ಣ ಪ್ರಮಾಣದ ಹೀರೊಯಿನ್ ಆಗಿ ಮೊದಲ ಸಿನಿಮಾ. ರಾಜಸ್ಥಾನದಲ್ಲಿನ ಚಿತ್ರೀಕರಣದ ಅನುಭವ ಅವರ ಸವಿನೆನಪುಗಳ ಪಟ್ಟಿಗೆ ಸೇರಿಕೊಂಡಿದೆ. ಹಾಸ್ಯನಟ ಚಿಕ್ಕಣ್ಣ ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸುವುದರ ಜೊತೆಗೆ, ಚಿತ್ರ ನಿರ್ಮಾಣದಲ್ಲೂ ಪಾಲುದಾರರಾಗಿದ್ದಾರೆ.



■ ರಘು